# ಶತಮಾನ ಕಂಡ ಬೆಂಗಳೂರಿನ ರಾಮಕೃಷ್ಣ ಮಠ

❑ ಸುರೇಶ ಮೂನ

**ಶತಮಾನದತ್ತ ದಾಪುಗಾಲು ಹಾಕುತ್ತಿರುವ ಬೆಂಗಳೂರಿನ ರಾಮಕೃಷ್ಣ ಮಠವು ರಾಮಕೃಷ್ಣ ಮಹಾಸಂಘದಲ್ಲಿ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಬೆಂಗಳೂರು ಮಹಾನಗರದಲ್ಲಿಯೇ ಅತ್ಯಂತ ಶಾಂತಿಭರಿತ ತಪೋಭೂಮಿಯೆಂದು ಪರಿಗಣಿಸಲ್ಪಟ್ಟಿರುವ ಈ ಪುಣ್ಯಸಂಸ್ಥೆ ಅಷ್ಟೇ ರೋಚಕವಾದ, ಸ್ಫೂರ್ತಿಭರಿತವಾದ ಇತಿಹಾಸವನ್ನೂ ಹೊಂದಿದೆ. ಅದರ ಸಮೀಕ್ಷೆಯನ್ನು ಮಾಡಿರುವ ಶ್ರೀ ಸುರೇಶ ಮೂನ ಅವರು ಶಿಕ್ಷಕರು, ಹವ್ಯಾಸಿ ಬರಹಗಾರರು ಮತ್ತು ಬೆಂಗಳೂರು ರಾಮಕೃಷ್ಣ ಮಠದ ನಿಕಟ ಭಕ್ತರು.**

**ದ**ಕ್ಷಿಣ ಬೆಂಗಳೂರಿನ ಬಸವನಗುಡಿ ರಸ್ತೆಯ ಪ್ರಮುಖ ಆಧ್ಯಾತ್ಮಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವವನ್ನು ಪಡೆದಿರುವ ಸ್ಥಳವೇ ರಾಮಕೃಷ್ಣ ಮಠ. ಈ ರಸ್ತೆಯ ವಿಶಾಲವಾದ ರಾಮಕೃಷ್ಣ ಚೌಕದ ಬಳಿ ಇರುವ ಮಠದ ಗೇಟನ್ನು ದಾಟಿ ಒಳಕ್ಕೆ ಬಂದರೆ ಸಾಕು ಹೊರಗಿನ ಪ್ರಪಂಚದ ಜಂಜಾಟದಲ್ಲಿ ನೊಂದ ಮನಸ್ಸಿಗೆ ಸಾಂತ್ವನ ಸಿಗುತ್ತದೆ. ಹಸಿರುಗಿಡಗಳನ್ನು ಒಳಗೊಂಡ ಸುಂದರ ಕೊಳದ ಬದಿಯಿಂದ ಸಾಗಿಬಂದು ಕೆಲವು ಮೆಟ್ಟಿಲುಗಳನ್ನೇರಿದ ನಂತರ ಸಿಗುವ ಪ್ರಾರ್ಥನಾ ಮಂದಿರವನ್ನು ಪ್ರವೇಶಿಸಿದರೆ ಎಂಥವರಿಗೂ ಅಲ್ಲಿಯೇ ಒಂದೆರಡು ನಿಮಿಷ ಕುಳಿತು ಧ್ಯಾನ ಮಾಡುವ ಮನಸ್ಸಾಗುತ್ತದೆ.

ಒಳಮಂದಿರದಲ್ಲಿರುವ ರಾಮಕೃಷ್ಣ ಪರಮಹಂಸರ ಪ್ರಶಾಂತ ಮುಖಭಾವದ ಚಿತ್ರ ಹಾಗೂ ಇದರ ಬಲಪಕ್ಕದ ಮಂದಿರದ ಶ್ರೀಮಾತೆ ಶಾರದಾದೇವಿಯವರ ಮಾತೃಭಾವವನ್ನು ವ್ಯಕ್ತಪಡಿಸುವ ಚಿತ್ರ ಇವು ಭಕ್ತರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದು ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ತಂದುಕೊಡುತ್ತವೆ. ಬಸವನಗುಡಿ ರಸ್ತೆಯಲ್ಲಿ ಬೆಳಗಿನ ಜಾವದಿಂದ ನಡುರಾತ್ರಿಯವರೆಗೆ ಎಡೆಬಿಡದೆ ಗದ್ದಲ ಮಾಡುತ್ತಾ ಸಾಗುವ ವಾಹನ ಸಂಚಾರವಿದ್ದರೂ ಮಠದ ಒಳಗೆ ಮಾತ್ರ ಹೂವು ಹಣ್ಣುಗಳನ್ನು ಕೊಡುವ ಎತ್ತರವಾದ ಗಿಡಮರಗಳ ನಡುವಣ ನಿಶ್ಶಬ್ದ ವಾತಾವರಣವನ್ನುಳ್ಳ ಈ ಪವಿತ್ರ ತಾಣದ ಐತಿಹಾಸಿಕ ಹಿನ್ನೆಲೆ ಈ ರೀತಿ ಇದೆ.

ತಮ್ಮ ಗುರು ಶ್ರೀರಾಮಕೃಷ್ಣರ ಇಚ್ಛೆ ಮತ್ತು ಅಣತಿಯಂತೆ ಸ್ವಾಮಿ ವಿವೇಕಾನಂದರು ೧೮೮೬ರಲ್ಲಿ ರಾಮಕೃಷ್ಣ ಸಂನ್ಯಾಸಿ ಪರಂಪರೆಯನ್ನು ಆರಂಭಿಸಿದರು. ೧೮೯೭ರಲ್ಲಿ ರಾಮಕೃಷ್ಣ ಮಿಷನ್ ಮಹಾಸಂಘವನ್ನೂ ೧೯೦೯ರಲ್ಲಿ ರಾಮಕೃಷ್ಣ ಮಠವನ್ನೂ ಕಲ್ಕತ್ತೆಯಲ್ಲಿ ಸ್ಥಾಪಿಸಿ **ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯ ಚ** ಎಂಬ ಧ್ಯೇಯವನ್ನು ಅವುಗಳ ಮುಂದಿಟ್ಟರು. ಕಳೆದ ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ ಈ ಮಹಾಸಂಘವು ಬೃಹತ್ತಾಗಿ ಬೆಳೆದು ಇಂದು ದೇಶವಿದೇಶಗಳಲ್ಲಿ ನೂರಾರು ಶಾಖೆಗಳ ಮೂಲಕ ಜನರಿಗೆ ಜೀವನದ ಸನ್ಮಾರ್ಗವನ್ನು ತೋರಿಸುತ್ತಿದೆ.

ಸ್ವಾಮಿ ವಿವೇಕಾನಂದರನ್ನು ಕಂಡಿದ್ದ ಮತ್ತು ಅವರೊಂದಿಗೆ ಸಂಪರ್ಕವನ್ನು ಹೊಂದಿದ್ದ ಕೆಲವು ಗಣ್ಯವ್ಯಕ್ತಿಗಳು ೧೯೦೯ರಲ್ಲಿ ಬೆಂಗಳೂರಿನಲ್ಲಿ ವೇದಾಂತ ಸೊಸೈಟಿ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಆಗಿನ ಮೈಸೂರು ಸರಕಾರದ ಸೀನಿಯರ್



*ಬೆಂಗಳೂರು ಮಠದ ಸಂಸ್ಥಾಪಕರಾದ ಸ್ವಾಮಿ ರಾಮಕೃಷ್ಣಾನಂದರು*

ಕೌನ್ಸಿಲರ್ ಆಗಿದ್ದ ಹಾಗೂ ನಂತರ ಮೈಸೂರು ರಾಜ್ಯದ ದಿವಾನರಾಗಿದ್ದ ವಿ.ಪಿ. ಮಾಧವರಾವ್ ಮತ್ತು ಮೈಸೂರು ಸ್ಟೇಟ್ ಟ್ರೂಪ್ಸ್‌ನ ಚೀಫ್ ಕಮಾಂಡೆಂಟ್ ಆಗಿದ್ದ ಲೆಫ್ಟಿನೆಂಟ್ ಕರ್ನಲ್ ಜೆ. ದೇಸರಾಜ ಅರಸ್ ಇವರುಗಳು ಸಂಸ್ಥೆಯ ಮಹಾಪೋಷಕರಾಗದರು. ಮೈಸೂರು ರಾಜಮನೆತನದ ಯುವರಾಜರಿಗೆ ಪಾಠವನ್ನು ಹೇಳಿಕೊಡುತ್ತಿದ್ದ ಎಂ. ಎ. ನಾರಾಯಣ ಅಯ್ಯಂಗಾರ್ ಅಧ್ಯಕ್ಷರಾದರು. ಇವರು ಮುಂದೆ ಸ್ವಾಮಿ ಶ್ರೀವಾಸಾನಂದ ಎಂಬ ಹೆಸರನ್ನು ಪಡೆದು ರಾಮಕೃಷ್ಣ ಮಿಷನ್ನಿನ ಯತಿಗಳಾದರು. ಬ್ರಹ್ಮವಾದಿನ್ ಪತ್ರಿಕೆಯ ಸಹಸಂಪಾದಕರಾಗಿದ್ದ ಜಿ.ಜಿ. ನರಸಿಂಹಾಚಾರಿಯರ್ ಮತ್ತು ಬೆಂಗಳೂರು ನಗರದ ಆರೋಗ್ಯಾಧಿಕಾರಿಯಾಗಿದ್ದ ಡಾ. ವಿ. ಪಲ್ಪು ಉಪಾಧ್ಯಕ್ಷರಾದರು. ಸ್ವಾಮಿ ವಿವೇಕಾನಂದರು ೧೮೯೨ರಲ್ಲಿ ಬೆಂಗಳೂರಿಗೆ ಬಂದಿದ್ದಾಗ ಈ ವೈದ್ಯಾಧಿಕಾರಿಯವರಲ್ಲಿಯೇ ಉಳಿದುಕೊಂಡಿದ್ದರು. ಡಾ. ಪಿ. ವೆಂಕಟರಂಗಂ ವೇದಾಂತ ಸೊಸೈಟಿಯ ಕಾರ್ಯದರ್ಶಿಗಳೂ, ಎ. ಆರ್ ಚಂದ್ರಶೇಖರ ಚೊಪ್ರ ಎಂಬುವರು ಸಹಕಾರ್ಯದರ್ಶಿಗಳೂ ಆಗಿದ್ದರು.




ಬೆಂಗಳೂರು ಮಠದ ಹಿಂದಿನ ಕಟ್ಟಡ

೧೯೦೪ರಲ್ಲಿ ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ರಾಮಕೃಷ್ಣಾನಂದರು ಬೆಂಗಳೂರಿಗೆ ಬಂದಿದ್ದಾಗ ಬೆಂಗಳೂರಿನಲ್ಲಿ ರಾಮಕೃಷ್ಣ ಮಿಷನ್ನಿನ ಪ್ರಥಮ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ತಿಳಿಸಲಾಯಿತು. ನಂತರ ೧೯೦೬ರಲ್ಲಿ ಅವರು ಎರಡನೇ ಬಾರಿಗೆ ಬಂದಿದ್ದಾಗ ಮೇಲೆ ತಿಳಿಸಿದ ಗಣ್ಯವ್ಯಕ್ತಿಗಳು ಹಾಗೂ ಇತರರ ಸಹಾಯದಿಂದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟನ್ನು ಪ್ರಾರಂಭಿಸಲಾಯಿತು. ಮೈಸೂರು ಸರಕಾರವು ಇದಕ್ಕಾಗಿ ಬಸವನಗುಡಿ ರಸ್ತೆಯಲ್ಲಿ ವಿಶಾಲವಾದ ಒಂದು ನಿವೇಶನವನ್ನು ನೀಡಿತು. ಸ್ವಾಮಿ ವಿವೇಕಾನಂದರ ಶಿಷ್ಯರಾಗಿದ್ದ ಸ್ವಾಮಿ ಆತ್ಮಾನಂದರು ಈ ಶಾಖೆಯ ಪ್ರಥಮ ಅಧ್ಯಕ್ಷರಾದರು. ಈ ಮೊದಲು ಇದು ಕೋಟೆ ಬಡಾವಣೆಯ ವೀರಸ್ವಾಮಿ ಮೊದಲಿಯಾರ್ ಬಂಗ್ಲೆಯ ಒಂದು ಬಾಡಿಗೆ ಮನೆಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

ರಾಮಕೃಷ್ಣ ಪರಮಹಂಸರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ಅಭೇದಾನಂದರು ಅಮೆರಿಕದಿಂದ ಬೆಂಗಳೂರಿಗೆ ೧೯೦೭ರ ಜುಲೈ ೨೯ರಂದು ಆಗಮಿಸಿದರು. ಆಗಸ್ಟ್ ೨೧ರ ವರೆವಿಗೆ ಬೆಂಗಳೂರಿನ ಮಹಾರಾಜರ ಅರಮನೆಯಲ್ಲಿ ರಾಜ್ಯದ ಅತಿಥಿಗಳಾಗಿ ಉಳಿದು ಇಲ್ಲಿ ಹಾಗೂ ಮೈಸೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಆಗಸ್ಟ್ ೨೦ರಂದು ಇವರು ಬಸವನಗುಡಿ ರಸ್ತೆಯ ರಾಮಕೃಷ್ಣ ಮಿಷನ್ ಆಶ್ರಮದ ಕಟ್ಟಡಕ್ಕೆ ಶಂಕುಸ್ಥಾಪನೆಯನ್ನು ಮಾಡಿದರು. ಒಂದು ಪೆಟ್ಟಿಗೆಯಲ್ಲಿ, ಸಂಸ್ಕೃತದಲ್ಲಿದ್ದ ಒಂದು ಸಣ್ಣ ಭಗವದ್ಗೀತಾ ಪ್ರತಿಯನ್ನೂ ಭಗವಾನ್ ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಚಿತ್ರಗಳು, ಪಂಚ ಲೋಹಗಳು ಹಾಗೂ ಕೆಲವು ಪವಿತ್ರ ಹಿಂದೂ ಚಿಹ್ನೆಗಳನ್ನೂ ಇಟ್ಟು, ಅದನ್ನು ಶಂಕುಸ್ಥಾಪನೆ ಮಾಡಿದ ಸ್ಥಳದಲ್ಲಿ ನೆಲದೊಳಗೆ ಇಡಲಾಯಿತು.

ಶ್ರೀರಾಮಕೃಷ್ಣರ ಸುಪ್ರಸಿದ್ಧ ಶಿಷ್ಯರೂ, ರಾಮಕೃಷ್ಣ ಮಠದ ಪ್ರಥಮ ಅಧ್ಯಕ್ಷರೂ ಆಗಿದ್ದ ಸ್ವಾಮಿ ಬ್ರಹ್ಮಾನಂದರು ೧೯೦೯ರ ಜನವರಿ ೨೦ರಂದು ರಾಮಕೃಷ್ಣಾಶ್ರಮದ ಹೊಸ ಕಟ್ಟಡವನ್ನು ಉದ್ಘಾಟಿಸಿ ಶ್ರೀರಾಮಕೃಷ್ಣರ ಭಾವಚಿತ್ರವನ್ನು ಅನಾವರಣ ಮಾಡಿದರು. ಅದುವರೆವಿಗೂ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಎಂದಿದ್ದ ಹೆಸರನ್ನು ಅಂದು ರಾಮಕೃಷ್ಣಾಶ್ರಮ ಎಂದು ಬದಲಿಸಲಾಯಿತು.

ಹೀಗೆ ವಿಧ್ಯುಕ್ತವಾಗಿ ಪ್ರಾರಂಭಗೊಂಡು ಕಾರ್ಯ ನಿರ್ವಹಿಸತೊಡಗಿದ ಶ್ರೀರಾಮಕೃಷ್ಣಾಶ್ರಮಕ್ಕೆ ಶ್ರೀಮಾತೆ ಶಾರದಾದೇವಿಯವರು ಬಂದಿದ್ದರೆಂಬುದು ಅತ್ಯಂತ ಮಹತ್ವಪೂರ್ಣ ಸಂಗತಿ. ತಮ್ಮ ದಕ್ಷಿಣಭಾರತ ಪ್ರವಾಸದ ಸಮಯದಲ್ಲಿ ಶ್ರೀಮಾತೆಯವರು ೧೯೧೧ರ ಮಾರ್ಚ್ ೨೪ರಂದು ಮದ್ರಾಸಿನಿಂದ ಬೆಂಗಳೂರಿಗೆ ಬಂದು ಈ ಆಶ್ರಮದಲ್ಲಿ ಕೆಲವು ದಿನಗಳ ಕಾಲ ತಂಗಿದ್ದರು. ಅವರು ತಂಗಿದ್ದ ಕೋಣೆಯಲ್ಲಿ ಅವರ ಭಾವಚಿತ್ರವನ್ನು ಪ್ರತಿಷ್ಠಾಪಿಸಲಾಗಿದ್ದು ಅದು ಪವಿತ್ರಮಂದಿರವಾಗಿದೆ.



ಶ್ರೀಮಾತೆಯವರು ಕುಳಿತು ಧ್ಯಾನ ಮಾಡಿದ ಬಂಡೆ

ಇಲ್ಲಿರುವಾಗ ಒಂದು ದಿನ ಸಂಜೆ ಶ್ರೀಮಾತೆಯವರು ಒಬ್ಬಿಬ್ಬರು ಆಶ್ರಮವಾಸಿಗಳೊಂದಿಗೆ ಆಶ್ರಮದ ಹಿಂದಿದ್ದ ಬಂಡೆಯೊಂದರ ಮೇಲೆ ಬಂದು ಕುಳಿತರು. ಆಗತಾನೇ ಸೂರ್ಯನು ಮುಳುಗಲಾರಂಭಿಸಿದ್ದ. ಸುತ್ತಲಿನ ಪ್ರಶಾಂತ ವಾತಾವರಣ, ಆಗಸದಲ್ಲಿನ ಸೂರ್ಯಾಸ್ತಮದ ದೃಶ್ಯ ಇವುಗಳಿಂದಾಗಿ ಶ್ರೀಮಾತೆಯವರು ದಿವ್ಯಭಾವದಲ್ಲಿ ತನ್ಮಯರಾದರು. ಈ ವಿಷಯವನ್ನು ತಿಳಿದ ರಾಮಕೃಷ್ಣಾನಂದರು ಕೂಡಲೇ ಬಂದು ಶ್ರೀಮಾತೆಯವರ ಪಾದಗಳಿಗೆರಗಿ **"ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ** ..." ಎಂದು ಸ್ತುತಿಸತೊಡಗಿದರು. ಕ್ರಮೇಣ ತಮ್ಮ ಭಾವಪರವಶತೆಯಿಂದ ಹೊರಬಂದ ಶ್ರೀಮಾತೆಯವರು ರಾಮಕೃಷ್ಣಾನಂದರ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿದರು. ಸ್ವಾಮಿಗಳ ಕೋರಿಕೆಯ ಮೇರೆಗೆ ಆ ಬಂಡೆಯ ಮೇಲೆ ಪಶ್ಚಿಮಾಭಿಮುಖವಾಗಿ ಕುಳಿತು ಜಪ ಮಾಡಿದರು. ಅಂದಿನಿಂದ ಆ ಶಿಲೆ ಪವಿತ್ರವಾಯಿತು. ಆ ಶಿಲೆಯ ಮೇಲೆ ಒಂದು ಪುಟ್ಟ ಮಂಟಪವನ್ನು ಕಟ್ಟಿ, ಶ್ರೀಮಾತೆಯವರ ಭಾವಚಿತ್ರವನ್ನು ಪ್ರತಿಷ್ಠಾಪಿಸಲಾಗಿದೆ. ಸುಂದರವಾದ

ಗಿಡಮರಗಳಿಂದ ಕೂಡಿದ ಪ್ರಶಾಂತ ವಾತಾವರಣವಿರುವ ಈ ಪವಿತ್ರಶಿಲೆಯ ಸಾನ್ನಿಧ್ಯ ಧ್ಯಾನಾಸಕ್ತರಿಗೆ ಅತ್ಯಂತ ಸೂಕ್ತವಾಗಿದೆ.

ಶ್ರೀರಾಮಕೃಷ್ಣರ ನೇರಶಿಷ್ಯರಾಗಿದ್ದ ಸ್ವಾಮಿ ಶಿವಾನಂದರು ಮತ್ತು ಸ್ವಾಮಿ ವಿಜ್ಞಾನಾನಂದರು ಸಹ ಈ ಆಶ್ರಮಕ್ಕೆ ಆಗಮಿಸಿ ಪವಿತ್ರಗೊಳಿಸಿದ್ದಾರೆ.

ಈ ಆಶ್ರಮದ ಮತ್ತೊಂದು ಮಹತ್ವಪೂರ್ಣ ಹಾಗೂ ಐತಿಹಾಸಿಕ ಸಂಗತಿಯೆಂದರೆ ಐದುದಶಕಗಳಿಗೂ ಹಿಂದಿನಿಂದ ವಿವೇಕಾನಂದ ಬಾಲಕ ಸಂಘವು ನಡೆದು ಬರುತ್ತಿರುವುದು. ಈ ಸಂಘವು ೧೯೫೩ರ ಏಪ್ರಿಲ್‌ನಲ್ಲಿ ಆಗ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಯತೀಶ್ವರಾನಂದಜೀಯವರ ಪ್ರಯತ್ನದಿಂದ ಪ್ರಾರಂಭವಾಯಿತು. ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಎಲ್ಲ ಚಟುವಟಿಕೆಗಳನ್ನೂ ಹಮ್ಮಿಕೊಂಡು ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಸಂಘ ರಾಮಕೃಷ್ಣಾಶ್ರಮದ ಅವಿಭಾಜ್ಯ ಅಂಗವಾಗಿದೆ. ೧೯೫೩ರಿಂದ ಬಾಲಕ ಸಂಘವನ್ನು ರೂಪಿಸಿದ ಸ್ವಾಮಿ ಶಾಸ್ತ್ರಾನಂದರಿಗೆ ೧೯೬೪ರಲ್ಲಿ ರಾಮಕೃಷ್ಣ ಮಹಾಸಂಘದ ವಿದೇಶದ ಒಂದು ಶಾಖೆಗೆ ವರ್ಗಾವಣೆಯಾಯಿತು. ನಂತರ ಪ್ರಾರಂಭದಿಂದಲೂ ಸಂಘದ ಚಟುವಟಿಕೆಗಳಲ್ಲಿ ನೆರವಾಗುತ್ತಿದ್ದ ಸ್ವಾಮಿ ದೇವರೂಪಾನಂದರು ೧೯೬೬ ರವರೆಗೆ ಇದರ ಮೇಲ್ವಿಚಾರಕರಾಗಿದ್ದರು. ೧೯೬೬ರಲ್ಲಿ ಈ ಜವಾಬ್ದಾರಿಯನ್ನು ವಹಿಸಿಕೊಂಡ ಸ್ವಾಮಿ ಪುರುಷೋತ್ತಮಾನಂದಜೀಯವರು ಸುಮಾರು ಎರಡೂವರೆ ದಶಕಗಳ ಕಾಲ ಇದನ್ನೊಂದು ಸುಭದ್ರ ಸಂಘವನ್ನಾಗಿ ರೂಪಿಸಿದರು. ಪ್ರಸ್ತುತ ಅಧ್ಯಕ್ಷರಾದ ಸ್ವಾಮಿ ಹರ್ಷಾನಂದಜಿಯವರ ಮಾರ್ಗದರ್ಶನದಲ್ಲಿ ಬಾಲಕ ಸಂಘವು ಮತ್ತಷ್ಟು ಪ್ರಾಮುಖ್ಯತೆಯನ್ನು ಪಡೆದು ಮುನ್ನಡೆಯುತ್ತಿದೆ. ೧೯೮೪ರ ಜನವರಿ ೧೨ರಂದು ವಿವೇಕಾನಂದ ಯುವಕ ಸಂಘವನ್ನು ಪ್ರಾರಂಭಿಸಿದ್ದು ಇಂದು ಎರಡೂ ಸಂಘಗಳು ಒಂದಕ್ಕೊಂದು ಪೂರಕವಾಗಿ ಕಾರ್ಯ ನಿರ್ವಹಿಸುತ್ತಿವೆ. ೨೦೦೩ರ ಮೇ ತಿಂಗಳಿನಲ್ಲಿ ಬಾಲಕ ಸಂಘದ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ವಿವೇಕಾನಂದ ಬಾಲಕಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಸ್ವಾಮಿ ಯತೀಶ್ವರಾನಂದರು, ಸ್ವಾಮಿ ಶಾಸ್ತ್ರಾನಂದರು




ಶ್ರೀರಾಮಕೃಷ್ಣರ ಪೂಜಾಗೃಹ

ಕಾಲಕ್ರಮೇಣ ಆಶ್ರಮದ ಆವರಣದಲ್ಲಿ ಶ್ರೀರಾಮಕೃಷ್ಣ ಶತಾಬ್ದಸ್ಮಾರಕ ನಿವಾಸ, ಪ್ರಾರ್ಥನಾಮಂದಿರ, ಸಂನ್ಯಾಸಿಗಳ ವಾಸಗೃಹ, ಸ್ವಾಮಿ ವಿವೇಕಾನಂದ ಶತಾಬ್ದ ಸಭಾಂಗಣ, ಶ್ರೀರಾಮಕೃಷ್ಣ ಸಭಾಂಗಣ ಇವೇ ಮೊದಲಾದ ಸುಂದರ ಕಟ್ಟಡಗಳು ನಿರ್ಮಾಣವಾಗಿವೆ. ಇಲ್ಲಿನ ಪ್ರತಿನಿತ್ಯದ ಕಾರ್ಯಕಲಾಪಗಳು ಅತ್ಯಂತ ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ನಡೆಯುತ್ತವೆ. ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ನಿತ್ಯಪೂಜೆ, ಆರತಿ, ಭಜನೆ, ಆಧ್ಯಾತ್ಮಿಕ ಪ್ರವಚನಗಳು, ದಿವ್ಯತ್ರಯರ ಜಯಂತ್ಯುತ್ಸವಗಳು, ಕೆಲವು ಪ್ರಮುಖ ಹಬ್ಬಗಳ ಆಚರಣೆ, ಆಧ್ಯಾತ್ಮಿಕ ಸತ್ಸಂಗಗಳು, ಸಾರ್ವಜನಿಕ ಗ್ರಂಥಾಲಯ, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಿವ್ಯತ್ರಯರ ಜೀವನ ಮತ್ತು ಸಂದೇಶ ಹಾಗೂ ಇತರ ಧಾರ್ಮಿಕಗ್ರಂಥಗಳ ಪ್ರಕಟಣೆ—ಮಾರಾಟ, ಕಾಲೇಜು ವಿದ್ಯಾರ್ಥಿಗಳಿಗಾಗಿ ಶಿಸ್ತುಬದ್ಧವಾದ ಶ್ರೀರಾಮಕೃಷ್ಣ ವಿದ್ಯಾರ್ಥಿಮಂದಿರ ಎಂಬ ವಿದ್ಯಾರ್ಥಿನಿಲಯ ಹೀಗೆ ಹಲವಾರು ಯೋಜನೆಗಳು ಇಲ್ಲಿ ಯಶಸ್ವಿಯಾಗಿ ನಿರ್ವಹಿಸಲ್ಪಡುತ್ತಿವೆ. ಇಲ್ಲಿ ನಡೆಯುವ ಪ್ರವಚನಗಳು ಮತ್ತು ಭಜನೆಗಳಿಗೆ ಸಾವಿರಾರು ಭಕ್ತರು ನೆರೆಯುವುದು ಈ ಆಶ್ರಮದ ಒಂದು ವೈಶಿಷ್ಟ್ಯ.

ಪ್ರಾರಂಭದಿಂದಲೂ ಇದ್ದ ರಾಮಕೃಷ್ಣಾಶ್ರಮ ಎಂಬ ಹೆಸರನ್ನು ಆಡಳಿತದ ಕಾರಣಗಳಿಂದಾಗಿ ಇತ್ತೀಚಿನ ವರ್ಷಗಳಲ್ಲಿ ರಾಮಕೃಷ್ಣ

ಮಠ ಎಂದು ಬದಲಾಯಿಸಲಾಯಿತು.


ರಾಮಕೃಷ್ಣ ಮಠವು ಹಲವಾರು ಸಮಾಜಸೇವಾ ಕಾರ್ಯಗಳಲ್ಲೂ ನಿರತವಾಗಿದೆ. ಬೆಂಗಳೂರಿನಿಂದ ಸುಮಾರು ೩೦ ಕಿ.ಮೀ. ದೂರದಲ್ಲಿರುವ ಶಿವನಹಳ್ಳಿ ಗ್ರಾಮವನ್ನು ಕೇಂದ್ರವನ್ನಾಗಿಟ್ಟುಕೊಂಡು ಸಾವಿರಾರು ಗ್ರಾಮಸ್ಥರಿಗೆ ವಿವಿಧ ರೀತಿಯಲ್ಲಿ ನೆರವಾಗಿದೆ. ಗೃಹನಿರ್ಮಾಣ, ಕುಡಿಯುವ ನೀರಿನ ಕೊಳವೆ ಬಾವಿ, ವಿದ್ಯುಚ್ಛಕ್ತಿ ಸರಬರಾಜು, ರಸ್ತೆ ನಿರ್ಮಾಣ, ವೈದ್ಯಕೀಯ ನೆರವು, ಉತ್ತಮ ಬೆಳೆ ತೆಗೆಯುವ ವಿಧಾನವನ್ನು ಕಲಿಸುವುದು, ರೇಷ್ಮೆ ಸಾಕಣಿಕೆ, ಏಳನೇ ತರಗತಿಯವರೆಗೆ ಶಾಲೆಗಳನ್ನು ನಡೆಸುವುದು, ವೃತ್ತಿಶಿಕ್ಷಣ, ಇಂತಹ ಕಾರ್ಯಗಳನ್ನು ರಾಮಕೃಷ್ಣ ಮಠವು ಯಶಸ್ವಿಯಾಗಿ ನೆರವೇರಿಸಿದೆ. ಈಗ, ಈ ಗ್ರಾಮೀಣ ಕೇಂದ್ರವನ್ನು ಶಿವನಹಳ್ಳಿಯಲ್ಲಿ ೧೯೬೬ರಲ್ಲಿ ಸ್ಥಾಪಿತವಾದ ರಾಮಕೃಷ್ಣ ಮಿಷನ್ ಸಂಸ್ಥೆಯ ಶಾಖೆಯು ವಹಿಸಿಕೊಂಡಿದೆ. ೧೯೦೮ರಲ್ಲಿ ಪ್ರಾರಂಭವಾದ ಅಲಸೂರಿನ ವಿವೇಕಾನಂದ ಆಶ್ರಮವು ಇದೇ ಮಠದ ಕಾರ್ಯವ್ಯಾಪ್ತಿಗೆ ಒಳಪಟ್ಟಿತ್ತು. ಈಗ ಇದು ರಾಮಕೃಷ್ಣ ಮಠ ಎಂದು ಸ್ವತಂತ್ರ ಕೇಂದ್ರವಾಗಿದೆ.



ಶ್ರೀರಾಮಕೃಷ್ಣ ವಿದ್ಯಾರ್ಥಿ ಮಂದಿರದ ಭವ್ಯ ಕಟ್ಟಡ

ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರೂ ಹಿರಿಯರೂ ಪೂಜ್ಯರೂ ಆದ ಸ್ವಾಮಿ ಹರ್ಷಾನಂದಜೀಯವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಈ ಎಲ್ಲ ಕಾರ್ಯಕ್ರಮಗಳೂ ಸುಸೂತ್ರವಾಗಿ ಜರುಗುತ್ತಿವೆ. ಇದೀಗ ಈ ರಾಮಕೃಷ್ಣಮಠದ ಶತಮಾನೋತ್ಸವವನ್ನು ಒಂದು ವರ್ಷದ ಕಾಲ ಆಚರಿಸುವ ಎಲ್ಲ ಸಿದ್ಧತೆಗಳೂ ನಡೆಯುತ್ತಿವೆ. ಆಶ್ರಮದ ಭಕ್ತಾದಿಗಳು ದಾನಿಗಳು ಮೊದಲಿನಿಂದಲೂ ಆಶ್ರಮದ ಬೆಳವಣಿಗೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

ಈ ಎಲ್ಲ ಕಾರಣಗಳಿಂದಾಗಿ ರಾಮಕೃಷ್ಣ ಮಠವು ಬೆಂಗಳೂರಿನ ಒಂದು ಹೆಮ್ಮೆಯ ಹಾಗೂ ಪ್ರತಿಷ್ಠಿತ ಧಾರ್ಮಿಕ ಆಧ್ಯಾತ್ಮಿಕ ಹಾಗೂ ಸಮಾಜಸೇವಾ ಸಂಸ್ಥೆಯೆಂದು ಪ್ರಸಿದ್ಧಿ ಪಡೆದಿದೆ.



ಶ್ರೀಮಾತೆ ಶಾರದಾದೇವಿಯವರ ಪೂಜಾಗೃಹ

**೧೯೦೪ರಿಂದ ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸಿರುವ ಅಧ್ಯಕ್ಷರುಗಳ ಹೆಸರುಗಳು ಈ ರೀತಿ ಇವೆ.**

| | | |
|---|---|---|
| ೧೯೦೪-೧೯೧೦ | — | ಸ್ವಾಮಿ ಆತ್ಮಾನಂದಜೀ |
| | | ಸ್ವಾಮಿ ಬೋಧಾನಂದಜೀ |
| | | ಸ್ವಾಮಿ ವಿಮಲಾನಂದಜೀ |
| ೧೯೧೦-೧೯೩೫ | — | ಸ್ವಾಮಿ ನಿರ್ಮಲಾನಂದಜೀ |
| ೧೯೩೫-೧೯೩೮ | — | ಸ್ವಾಮಿ ಸಿದ್ಧೇಶ್ವರಾನಂದಜೀ |
| | | ಸ್ವಾಮಿ ರಂಗನಾಥಾನಂದಜೀ |
| ೧೯೩೮-೧೯೫೧ | — | ಸ್ವಾಮಿ ತ್ಯಾಗೀಶಾನಂದಜೀ |
| ೧೯೫೧-೧೯೬೬ | — | ಸ್ವಾಮಿ ಯತೀಶ್ವರಾನಂದಜೀ |
| ೧೯೬೬-೧೯೭೦ | — | ಸ್ವಾಮಿ ಪ್ರಬುದ್ಧಾನಂದಜೀ |
| ೧೯೭೦-೧೯೮೩ | — | ಸ್ವಾಮಿ ಆದಿದೇವಾನಂದಜೀ |
| ೧೯೮೩-೧೯೮೯ | — | ಸ್ವಾಮಿ ಚಿದಾನಂದಜೀ |
| ೧೯೮೯ | — | ಸ್ವಾಮಿ ಹರ್ಷಾನಂದಜೀ |